# ರಾಜೀವ್ ಗಾಂಧಿ ವಿ.ವಿಯಿಂದ ಆಯುರ್ವೇದ ವೈದ್ಯಳಾದ ಪ್ರಥಮ ವಿದೇಶೀ ಮಹಿಳೆ

■ ಧನಂಜಯ ಮೂಡಬಿದಿರೆ

ಮೂಡಬಿದಿರೆ, ಮಾ. 27: ಹೌದು. ನಂಬಲೇ ಬೇಕು. ಸ್ವಿಟ್ಜರ್ ಲೆಂಡ್‌ನ ತರುಣಿಯೋರ್ವಳು ಬೆಂಗಳೂರಿನ ರಾಜೀವ ಗಾಂಧಿ ಆರೋಗ್ಯ ವಿ.ವಿ. ಯಿಂದ ಆಯುರ್ವೇದ ವೈದ್ಯಕೀಯ ಶಿಕ್ಷಣವನ್ನು ಯಶಸ್ವಿಯಾಗಿ ಪೂರೈಸಿದ್ದಾಳೆ!



ಆಕೆ ಕ್ಯಾರೋಲ್ ಥಿನ್ಸೆಲ್. ಕಲಿತದ್ದು ಮೂಡಬಿದಿರೆಯ ಆಳ್ವಾಸ್ ಎಜುಕೇಶನ್ ಫೌಂಡೇಶನ್ ಪ್ರವರ್ತಿತ ಆಳ್ವಾಸ್ ಆಯುರ್ವೇದ ಮೆಡಿಕಲ್ ಕಾಲೇಜಿನಲ್ಲಿ, ನಾಲ್ಕೂವರೆ ವರ್ಷದ ಬಿಎಎಂಎಸ್ ಪದವಿಯಲ್ಲಿ ಆಕೆ ಶೇ.71 ಅಂಕ ಪಡೆದಿದ್ದಾರೆ. ಕಲಿಕೆಯ ಯಾವುದೇ ಹಂತದಲ್ಲಿ ಹಿಂದೆ ಬೀಳದೆ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಆಯುರ್ವೇದದ ವಿವಿಧ ಶಾಖೆಗಳಿಗೆ ಸಂಬಂಧಿಸಿದಂತೆ ಡಿಪ್ಲೊಮಾ ಪದವಿ ಪಡೆದವರಿದ್ದಾರೆ. ಆದರೆ ಪೂರ್ಣ ಪ್ರಮಾಣದಲ್ಲಿ ಆಯುರ್ವೇದ ವೈದ್ಯಕೀಯ ಪದವಿ ಪಡೆದದ್ದು ರಾಜೀವ್ ಗಾಂಧಿ ವಿ.ವಿ. ಇತಿಹಾಸದಲ್ಲೇ ಇದೇ ಪ್ರಥಮ.

**ಎಲ್ಲಿಯ ಮೂಡಬಿದಿರೆ? ಎಲ್ಲಿಯ ಸ್ವಿಟ್ಜರ್‌ಲೆಂಡ್?**

ಆಯುರ್ವೇದ ಕಲಿಕೆಗೆ ಬೇಕು ಸಂಸ್ಕೃತ ಭಾಷೆ. ನಮ್ಮಲ್ಲೇ ಹೆಚ್ಚಿನವರಿಗೆ ಸಂಸ್ಕೃತ ಗೊತ್ತಿಲ್ಲ, ಇನ್ನು ಆ ದೂರದ ದೇಶದಿಂದ ಇಲ್ಲಿಗೆ ಬಂದು ಸಂಸ್ಕೃತ ಕಲಿವ ಸವಾಲು ಒಂದೆಡೆ; ಈ ದೇಶದ ಪರಿಸರ ಪ್ರಕೃತಿ, ಪುರಾಣ, ಸಂಸ್ಕೃತಿ ವಿವರಗಳೊಂದಿಗೆ ಹಾಸು ಹೊಕ್ಕಾದ ಆಯುರ್ವೇದ ಕಲಿಯುವ ಸವಾಲು ಇನ್ನೊಂದೆಡೆ. ಇಷ್ಟಕ್ಕೂ ಈ ಬಿಳಿ ಹುಡುಗಿ ತಂಪು ದೇಶ ಸ್ವಿಟ್ಜರ್ ಲೆಂಡ್‌ನಿಂದ ಇಲ್ಲಿಗೆ ಬಂದು ಇಲ್ಲಿನ ತೀಕ್ಷ್ಣ ಬಿಸಿಲ ಬೇಗೆಯನ್ನು ಸಹಿಸಿಕೊಂಡು ಓದುವ ತುರ್ತು ಏನಿತ್ತು?

'ನನಗೆ ಆಯುರ್ವೇದ ಕಲಿಯಬೇಕು ಅನ್ನಿಸಿತ್ತು, ಹಾಗೆ ಬಂದೆ, ಕಲಿತೆ' ಎಂದು ಕ್ಯಾರೋಲ್ ಸಹಜವಾಗಿ ಹೇಳುತ್ತಾರೆ. ಹೀಗೆ ಹೇಳುವಾಗ ಆಕೆಯ ಮುಖದಲ್ಲಿ ಸಾರ್ಥಕತೆ ಬೆರೆತ ಮುಗ್ಧ ಮುಗುಳ್ನಗೆ ಸುಳಿದಾಡುತ್ತದೆ.

ತಂದೆ ಸ್ವಿಟ್ಜರ್‌ಲೆಂಡ್‌ನ ಕಾಲೇಜೊಂದರ ಪ್ರಾಂಶುಪಾಲ. ತಾಯಿ ಮರಿಯಾನ್. ಆಕೆಯ ಸ್ನೇಹಿತೆ ಡಾ| ಹುಸ್ನೀಕರ್. ಈ ಡಾಕ್ಟರಿಗೆ ಹೇಗೋ ಮೂಡಬಿದಿರೆಯ ಆಳ್ವಾಸ್ ಆಶ್ರಯದಲ್ಲಿ ನಡೆವ ವಿರಾಸತ್ ನೋಡುವ ಅವಕಾಶ ಒದಗಿ ಬಂತು. ಆಯುರ್ವೇದ ಗಿಡ ಮೂಲಿಕೆಗಳ ಅಪೂರ್ವ ಶೋಭಾವನ, ಔಷಧ ತಯಾರಿಕಾ ಕೇಂದ್ರ, ಆಳ್ವಾ ಫಾರ್ಮಸಿ, ವಿದ್ಯಾಗಿರಿಯಲ್ಲಿರುವ ಒಂದಷ್ಟು ಶಿಕ್ಷಣ ಸಂಸ್ಥೆಗಳು ಎಲ್ಲವೂ ಈ ವೈದ್ಯೆಯನ್ನು ಸೆಳೆದವು. ಆಕೆಯಿಂದ ಪ್ರೇರಿತರಾಗಿ ಮೂಡಬಿದಿರೆಗೆ ಬಂದ ಮರಿಯಾನ್ ತಮ್ಮ ಮಗಳನ್ನು ಆಯುರ್ವೇದ ವ್ಯಾಸಂಗಕ್ಕಾಗಿ ಇಲ್ಲಿ ಸೇರಿಸಿದರು.

ವಿದೇಶಿ ಹುಡುಗಿಯೊಬ್ಬಳು ಭಾರತದಲ್ಲಿ ಅದರಲ್ಲೂ ಆಯುರ್ವೇದದಂಥ ವೈದ್ಯಕೀಯ ಶಿಕ್ಷಣಕ್ಕೆ ಸೇರುವುದು ಅಷ್ಟು ಸುಲಭವಲ್ಲ. ಸುಮಾರು ಒಂದು ವರ್ಷಕಾಲ ಆರಂಭದ ಆ ಎಲ್ಲ ಪ್ರಕ್ರಿಯೆಗಳಿಗೆ ಆಳ್ವಾಸ್ ಎಜುಕೇಶನ್ ಫೌಂಡೇಶನ್‌ನ ಅಧ್ಯಕ್ಷ ಡಾ| ಎಂ. ಮೋಹನ್ ಆಳ್ವರು ಎಲ್ಲ ರೀತಿಯ ಸಹಕಾರ ನೀಡಿದರು.

ಈ ನಾಲ್ಕೈದು ವರ್ಷಗಳಲ್ಲಿ ಇಲ್ಲಿನ ಆಹಾರ, ಉಡುಪು, ಮನೋರಂಜನೆ ಎಲ್ಲವನ್ನೂ ಕುತೂಹಲದಿಂದ ತನ್ನದಾಗಿಸಿಕೊಳ್ಳಲು ಪ್ರಯತ್ನಿಸುತ್ತಾ ಬಂದಿರುವ ಕ್ಯಾರೋಲ್ ಸೀರೆ ಉಡುತ್ತಾರೆ. ಆಳ್ವಾಸ್‌ನ ಕಾರ್ಯಕ್ರಮಗಳಲ್ಲಿ ಅತಿಥಿಗಳಿಗೆ ವನಿತೆಯರ ಜತೆಗೂಡಿ ಆರತಿ ಎತ್ತಿ ತಿಲಕವಿಡುತ್ತಾರೆ, ಹೂ ಪನ್ನೀರು ಎರಚುತ್ತಾರೆ. ಮುಂದಿನ ದಿನಗಳಲ್ಲಿ ಕ್ಯಾರೋಲ್ ಥಿನ್ಸೆಲ್ ಭಾರತ, ಸ್ವಿಸ್ ಮಾತ್ರವಲ್ಲ ಅವಕಾಶ ಸಿಕ್ಕಿದರೆ ಅನ್ಯ ದೇಶಗಳಲ್ಲಿ ಭಾರತದ ಆಯುರ್ವೇದದ ಕಂಪನ್ನು ಬೀರುವಂತಾಗಲಿ.

## ಡಾ| ಆಳ್ವರು ಹೇಳುತ್ತಾರೆ

'ಒಂದೇ ಒಂದು ದಿನ ಆಕೆ ರಜೆ ಹಾಕಿಲ್ಲ, ನನಗೆ ಅದು ಆಗುವುದಿಲ್ಲ, ಇದು ಸರಿ ಹೋಗುವುದಿಲ್ಲ, ಇಲ್ಲಿ ಬಿಸಿಲು, ಇಲ್ಲಿನ ಫುಡ್ ಹೀಗೆ, ಹಾಗೆ ...ಎಂಬಂಥ ಕಂಪ್ಲೇಂಟು ನೀಡಿದವಳಲ್ಲ. ಯಾವುದೇ ವಿಭಾಗದ ಬೋಧಕರು ಆಕೆಯ ಬಗ್ಗೆ ಯಾವುದೇ ರೀತಿಯ ನೆಗೆಟಿವ್ ಅಭಿಪ್ರಾಯ ಹೇಳಿಲ್ಲ, ಎಲ್ಲರೂ ಮೆಚ್ಚಿಕೊಂಡಿದ್ದಾರೆ. ಆಯುರ್ವೇದ ಇತಿಹಾಸ, ಸಂಸ್ಕೃತ, ಪದಾರ್ಥ ವಿಜ್ಞಾನ ಸಹಿತ ಎಲ್ಲ ವಿಷಯಗಳಲ್ಲಿ ಆಕೆ ನಾವೆಲ್ಲ ಆಶ್ಚರ್ಯ ಪಡುವ ಸಾಧನೆ ತೋರಿಸಿದ್ದಾಳೆ. ನಮ್ಮ ಸಂಸ್ಥೆಯಲ್ಲಿ ಕಲಿತ ವಿದೇಶೀ ಹುಡುಗಿಯೊಬ್ಬಳು ನಮ್ಮ ರಾಜೀವ್ ಗಾಂಧಿ ಆರೋಗ್ಯ ವಿ.ವಿ.ಯಲ್ಲಿ ಮೊತ್ತ ಮೊದಲ ಬಾರಿಗೆ ಆಯುರ್ವೇದ ವೈದ್ಯಕೀಯ ಪದವಿಯನ್ನು ಪಡೆಯುವಂತಾಗಿರುವುದು ಹೆಮ್ಮೆಯ ಸಂಗತಿ'

## ಸೇವೆ: ಅಲ್ಲಿ ಸ್ವಲ್ಪ ಇಲ್ಲಿ ಸ್ವಲ್ಪ

[illegible] ಆರು ತಿಂಗಳು ಹೌಸ್ ಸರ್ಜನ್ ಆಗಿ ಅನುಭವ ಪಡೆಯಲು ಸಿದ್ಧತೆ ನಡೆಸುವ ಕ್ಯಾರೋಲ್ ಥಿನ್ಸೆಲ್ ಅವರನ್ನು ಉದಯವಾಣಿ ಮಾತನಾಡಿಸಿದಾಗ...

**■ ಸ್ವಿಟ್ಜರ್‌ಲೆಂಡ್‌ನಲ್ಲಿ ಆಯುರ್ವೇದದಂಥ ವೈದ್ಯಕೀಯ ಪದ್ಧತಿ ಇದೆಯೇ?**

ಹೌದು. ಗಿಡಮೂಲಿಕೆಗಳನ್ನಾಧರಿಸಿದ ವೈದ್ಯ ಪದ್ಧತಿ ಇದೆ. ಜತೆಗೆ ಹೋಮಿಯೋಪತಿ ಕೂಡ ಅಲ್ಲಿ ಜನಪ್ರಿಯವಾಗಿದೆ.

**■ ಆಯುರ್ವೇದದೊಂದಿಗೆ ಇಲ್ಲಿನ ಸಂಸ್ಕೃತಿ, ಜೀವನ ಶೈಲಿ, ಇತಿಹಾಸ, ಪುರಾಣ, ಕಾವ್ಯಗಳ ಪರಿಚಯ, ತಿಳುವಳಿಕೆ ಬೇಕು ಎಂದು ಅನ್ನಿಸಿದ್ದುಂಟೇ?**

ಹೌದು. ಇಲ್ಲಿಗೆ ಬಂದ ಅನಂತರ ಬಹಳ ತಿಳಿದುಕೊಳ್ಳಬೇಕಾದ ವಿಚಾರಗಳಿವೆ ಎಂಬುದು ಮನವರಿಕೆಯಾಯಿತು. ನನ್ನ ಅಧ್ಯಯನಕ್ಕೆ ಪೂರಕವಾಗಿ ಅಭ್ಯಾಸ ಮಾಡಲು ಒಂದಿಷ್ಟು ಪ್ರಯತ್ನ ಮಾಡಿದ್ದೇನೆ.

**■ ಮುಂದೆ?**

ಪಂಚಕರ್ಮದಲ್ಲಿ ಸ್ನಾತಕೋತ್ತರ ಪದವಿ. ಮತ್ತೆ ಅದರದ್ದೇ ಪ್ರಾಕ್ಟೀಸ್.

**■ ಭಾರತದಲ್ಲೇ ಸೇವೆ ಮಾಡುತ್ತೀರಾ?**

ಸ್ವಲ್ಪ ಇಲ್ಲಿ, ಸ್ವಲ್ಪ ಅಲ್ಲಿ (ಸ್ವಿಟ್ಜರ್‌ಲೆಂಡ್‌ನಲ್ಲಿ).

**■ ಇಲ್ಲಿನ ಗಿಡಮೂಲಿಕೆಗಳನ್ನು ಪರದೇಶಕ್ಕೆ ರಫ್ತು ಮಾಡಲು, ಆಮದು ಮಾಡಿಕೊಳ್ಳಲು ಕಾನೂನಿನ ತೊಡಕುಗಳಿವೆಯಲ್ಲ?**

ಇದೆ. ಆದರೆ ಸಿದ್ಧ ಆಯುರ್ವೇದ ಔಷಧಿಗಳನ್ನು ಒಯ್ಯಬಹುದಲ್ಲ.

**■ ಇಲ್ಲಿನ ಭಾಷೆಗಳನ್ನು ಕಲಿಯಲು ಪ್ರಯತ್ನಿಸಿದ್ದೀರಾ?**

ಕನ್ನಡ ಅರ್ಥವಾಗುತ್ತದೆ. ಕಲಿಯಲು ಕಷ್ಟ. ಆದರೆ ಇಲ್ಲಿ ಚಿಕಿತ್ಸೆಗಾಗಿ ಬರುವವರು ಮಾತನಾಡುವುದು ತುಳು. ಅದು ಇನ್ನೂ ಕಷ್ಟ. ಸಹಪಾಠಿಗಳಲ್ಲಿ ಹೆಚ್ಚಿನವರು ಮಲೆಯಾಳಂ ಮಾತನಾಡುವುದರಿಂದ ಅದರ ಸವಿ ಸವಿದಿದ್ದೇನೆ.

**■ ಹವಾಮಾನದ ತೀವ್ರ ಬದಲಾವಣೆ ನಿಮ್ಮನ್ನು ಕಾಡುತ್ತಿಲ್ಲವೇ?**

ಕಾಡಿದೆ. ಎಲ್ಲವನ್ನೂ ಸಹಜವಾಗಿಯೇ ಸ್ವೀಕರಿಸಿದ್ದೇನೆ. ಸ್ವಿಟ್ಜರ್ ಲೆಂಡ್‌ನಲ್ಲಿ ಚಳಿಗಾಲ ಮೈನಸ್ 3 ಡಿಗ್ರಿ, ಬೇಸಗೆಯಲ್ಲಿ 27ರಿಂದ 30 ಡಿಗ್ರಿ. ಆದರೂ ಇಲ್ಲಿ ಹೊಂದಿಕೊಂಡೇ ಇದ್ದೇನಲ್ಲ?

**■ ಅಭಿವೃದ್ಧಿಯ ಹೆಸರಲ್ಲಾಗುತ್ತಿರುವ ಅರಣ್ಯ ನಾಶ ಪರ್ಯಾಯವಾಗಿ ಗಿಡಮೂಲಿಕೆಗಳ ನಾಶಕ್ಕೆ ಕಾರಣವಾಗುತ್ತಿದೆಯಲ್ಲ? ನಿಮ್ಮಲ್ಲಿ ಹೇಗೆ?**

ನಮ್ಮಲ್ಲೂ ಆಗುತ್ತಿದೆ. ಆದರೆ ಇಲ್ಲೇ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಿರುವಂತಿದೆ. ನಮ್ಮಲ್ಲಿ ಪರಿಸರ ಕಾಳಜಿಯ ಕೆಲಸ ತೀವ್ರವಾಗಿ ನಡೆಯುತ್ತಿದೆ.